ಅನಾರೋಗ್ಯದಿಂದ ಬಳಲುವಂತಾದ ಹಸುಗಳು । ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲು ಗ್ರಾಮಸ್ಥರ ಒತ್ತಾಯ

ಮರಳು ಕಲಬೆರಕೆ ಪಶು ಆಹಾರ ಪೂರೈಕೆ: ಆಕ್ರೋಶ

ಸಂ.ಕ. ಸಮಾಚಾರ, ಮಾಗಡಿ

ಹಾಲು ಉತ್ಪಾದಕರ ಜೀವನಾಡಿಯಾಗಿರುವ ಪಶು ಆಹಾರದಲ್ಲಿ ಭಾರಿ ಪ್ರಮಾಣದಲ್ಲಿ ಕಲ್ಲು ಮತ್ತು ಮಣ್ಣು ಮಿಶ್ರಣವಾಗುತ್ತಿದ್ದು, ಜಾನುವಾರುಗಳ ಆರೋಗ್ಯ ಹದಗೆಟ್ಟು ಹೈನುಗಾರರು ತೀವ್ರ ಕಂಗಾಲಾಗಿದ್ದಾರೆ. ಪ್ರತಿ 50 ಕೆ.ಜಿ ತೂಕದ ಒಂದು ಮೂಟೆ ಪಶು ಆಹಾರಕ್ಕೆ 1,260 ರೂ. ನೀಡಿ ಖರೀದಿಸುತ್ತಿದ್ದು, ಅದರಲ್ಲಿ ಅಪಾರ ಪ್ರಮಾಣದ ಕಲ್ಲು-ಮರಳು ಪತ್ತೆಯಾಗುತ್ತಿರುವುದು ಅನ್ನದಾತರ ಆಕ್ರೋಶಕ್ಕೆ ಕಾರಣವಾಗಿದೆ.

ಸಾಮಾನ್ಯವಾಗಿ ಒಣ ಆಹಾರವನ್ನೇ ಹಸುಗಳಿಗೆ ನೀಡುತ್ತಿದ್ದ ರೈತರು, ಇತ್ತೀಚೆಗೆ ಹಸುಗಳಲ್ಲಿ ನಿಶ್ಯಕ್ತಿ ಹಾಗೂ ಅಜೀರ್ಣ ಸಮಸ್ಯೆ ಹೊಟ್ಟೆಯಲ್ಲಿ ಗಾಳಿ ತುಂಬಿಕೊಳ್ಳುವುದು ಕಾಣಿಸಿಕೊಂಡ ಹಿನ್ನೆಲೆಯಲ್ಲಿ ಆಹಾರವನ್ನು ನೀರಿನಲ್ಲಿ ನೆನೆಸಿ ಕಲಸಿ ನೋಡಿದ್ದಾರೆ. ಈ ವೇಳೆ ಪಾತ್ರೆಯ ತಳಭಾಗದಲ್ಲಿ ಮುಕ್ಕಾಲು ಕೆ.ಜಿ ಯಿಂದ ಒಂದೂವರೆ ಕೆ.ಜಿ ವರೆಗೆ ಬಿಳಿ ಕಲ್ಲುಗಳು ಹಾಗೂ ಮಣ್ಣಿನ ಕಣಗಳು ಶೇಖರಣೆಯಾಗಿರುವುದು ಬೆಳಕಿಗೆ ಬಂದಿದೆ. 6 ಕೆ.ಜಿ ಫೀಡ್ಸ್‌ನಲ್ಲಿಯೇ ಇಷ್ಟೊಂದು ಪ್ರಮಾಣದ ಕಲ್ಲು, ಮಣ್ಣು ಸಿಗುತ್ತಿರುವುದು ರೈತರನ್ನು ಬೆಚ್ಚಿಬೀಳಿಸಿದೆ.

ಬಮೂಲ್ ವತಿಯಿಂದ ಪೂರೈಸಿರುವ ಪಶು ಆಹಾರದಲ್ಲಿ ಮರಳು ಕಲಬೆರಕೆಯಾಗಿದೆ ಎಂದು ರೈತರು ತೋರಿಸಿದರು.

ಲಕ್ಷಾಂತರ ರೂಪಾಯಿ ಸಾಲ-ಸೋಲ ಮಾಡಿ ಹಸುಗಳನ್ನು ಸಾಕಿ ಬದುಕು ಕಟ್ಟಿಕೊಂಡಿರುವ ರೈತರಿಗೆ ಈ ಕಳಪೆ ಆಹಾರ ದೊಡ್ಡ ಪೆಟ್ಟು ನೀಡಿದೆ. ದಿನವೊಂದಕ್ಕೆ ಅರ್ಧ ಕೆ.ಜಿಗೂ ಹೆಚ್ಚು ಕಲ್ಲು ಹಸುವಿನ ಹೊಟ್ಟೆ ಸೇರುತ್ತಿರುವುದರಿಂದ ಜೀರ್ಣಾಂಗವ್ಯೂಹ ಹಾಳಾಗುತ್ತಿದೆ. ಇದರಿಂದ 7-8 ಲೀಟರ್ ಹಾಲು ಕೊಡುತ್ತಿದ್ದ ಹಸುಗಳು ದಿಢೀರನೆ 2-3 ಲೀಟರ್‌ಗೆ ಇಳಿದಿದ್ದು, ಹಸುಗಳು ಕೃಶವಾಗಿ ಸಾವನ್ನಪ್ಪುವ ಭೀತಿ ಎದುರಾಗಿದೆ.

ಸುಮಾರು 25 ವರ್ಷಗಳಿಂದ ರೈತರ ಅಚಲ ನಂಬಿಕೆಗೆ ಪಾತ್ರವಾಗಿದ್ದ ಬಮೂಲ್ ಗುಣಮಟ್ಟದ ಪಶು ಆಹಾರಕ್ಕೆ ಇತ್ತೀಚಿನ ತಿಂಗಳುಗಳಲ್ಲಿ ಕಳಪೆ ಸರಬರಾಜುದಾರರ ಹಾವಳಿ ತಟ್ಟಿದೆ ಎಂದು ರೈತರು ಆರೋಪಿಸಿದ್ದಾರೆ. ಕಲ್ಲು ಹೊಡೆಯುವ ಟೆಂಡರ್ ಪಡೆದವರಂತೆ ವರ್ತಿಸುತ್ತಿರುವ ಗುತ್ತಿಗೆದಾರರು ಹಾಗೂ ಇದಕ್ಕೆ ಹೊಣೆಗಾರರಾದ ಅಧಿಕಾರಿಗಳ ವಿರುದ್ಧ ಉನ್ನತ ಮಟ್ಟದ ತನಿಖೆಯಾಗಬೇಕು ಎಂದು ಗ್ರಾಮಸ್ಥರು ಒಕ್ಕೊರಲ ಆಗ್ರಹ ಮಾಡಿದ್ದಾರೆ.

ಇದೇ ವೇಳೆ ರೈತರಾದ ಗಂಗಾಧರ್, ಗಂಗರಾಮಯ್ಯ, ರಾಮಚಂದ್ರಯ್ಯ, ಪುಟ್ಟಸ್ವಾಮಯ್ಯ, ರಂಗೇಗೌಡ, ಗಂಗಣ್ಣ, ವೆಂಕಟೇಶ್, ಶಾರದಮ್ಮ, ಅಂಬಿಕಾ, ಹನುಮಂತಯ್ಯ, ರಾಮಚಂದ್ರಯ್ಯ ಇದ್ದರು.

ದೊಮ್ಮಸಂದ್ರದ ಗ್ರಾಪಂನಲ್ಲಿ ದುರ್ಗಾದೇವಿಗೆ ವಿಶೇಷ ಪೂಜೆ

ಸಂ.ಕ.ಸಮಾಚಾರ ದೊಮ್ಮಸಂದ್ರ

ಆಯುಧ ಪೂಜೆ ಯುಗಯುಗಗಳಿಂದ ಬಂದಿರುವ ಆಚರಣೆಯಾಗಿದ್ದು, ಅತಿ ಹೆಚ್ಚು ಮಹತ್ವ ಪಡೆದಿರುವ ಪೂಜೆಯಾಗಿದೆ ಎಂದು ಗ್ರಾಪಂ ಆಡಳಿತ ಅಧಿಕಾರಿ ಮದನ್ ಹೇಳಿದರು.

ದೊಮ್ಮಸಂದ್ರ ಗ್ರಾಮ ಪಂಚಾಯಿತಿಯಲ್ಲಿ ದುರ್ಗಾದೇವಿಗೆ ವಿಶೇಷ ಪೂಜೆ ಸಲ್ಲಿಸಿ ಮಾತನಾಡಿದ ಅವರು, ನಾವು ದಿನನಿತ್ಯ ಬಳಸುವ ಆಯುಧಗಳಿಗೆ, ಉಪಕರಣಗಳಿಗೆ ದೇವರ ರೂಪದಲ್ಲಿ ಪೂಜೆ ಸಲ್ಲಿಸುವುದು ನಮ್ಮ ಸಂಸ್ಕೃತಿ ಎಂದು ಹೇಳಿದರು.

ಪಿಡಿಒ ಜ್ಯೋತಿ ಮಾತನಾಡಿ, ಮಹಾಭಾರತದ ಕಾಲದಲ್ಲಿ ಪಾಂಡವರು ತಮ್ಮ ಆಯುಧಗಳನ್ನು ಬನ್ನಿ ಮರದಲ್ಲಿ ಅಡಗಿಸಿಟ್ಟು, ಒಂದು ವರ್ಷದ ಅಜ್ಞಾತವಾಸದ ನಂತರ ವಿಜಯದಶಮಿಯ ದಿನದಂದು ತೆಗೆದು ಪೂಜೆ ಮಾಡಿದ ದಿನವೇ ಆಯುಧ ಪೂಜೆ, ಅಂದಿನಿಂದ ಇಂದಿನವರೆಗೆ ಈ ಆಚರಣೆ ನಡೆದುಕೊಂಡು ಬಂದಿದೆ. ನೇಗಿಲು, ಚಕ್ರ, ಸುತ್ತಿಗೆ, ವಿದ್ಯಾರ್ಥಿಗಳು ತಮ್ಮ ಪುಸ್ತಕಗಳಿಗೆ ಪೂಜೆ ಮಾಡುವುದು ಈ ದಿನದ ವಿಶೇಷ ಎಂದು ತಿಳಿಸಿದರು.

ಪೌರಕಾರ್ಮಿಕರಿಗೆ ಬಟ್ಟೆ, ಹಣ್ಣು, ಹಂಪಲು ಕೊಟ್ಟು ಸನ್ಮಾನಿಸಲಾಯಿತು. ಈ ವೇಳೆ ಪಾಪರೆಡ್ಡಿ, ಶಿವಾನಂದ್,ಕಾರ್ತಿಕ್, ಶಿವರುದ್ರ, ನಾರಾಯಣಪ್ಪ,ರಾಜೇಶ್,ಬೋರ್‌ವೆಲ್ ರಾಜಣ್ಣ,ಮಧು, ಶ್ರೀಧರ್, ಭಾಗವಹಿಸಿದ್ದರು.

34ನೇ ಗುರುಪಾದುಕಾ ಪೂಜೆ

ಸಂ.ಕ. ಸಮಾಚಾರ, ವಿಜಯಪುರ

ಹದಿನೇಳು-ಹದಿನೆಂಟನೇ ಶತಮಾನದ ಪ್ರಸಿದ್ಧ ದ್ವಿಭಾಷಾ ತತ್ವಪದಕಾರರಾದ ಕೈವಾರ ತಾತಯ್ಯನವರ (ಯೋಗಿ ನಾರೇಯಣಪ್ಪ) ಕೀರ್ತನೆಗಳು ಮತ್ತು ವಚನಗಳು ಶ್ರೇಷ್ಠ ಜೀವನ ದರ್ಶನವನ್ನು ಒಳಗೊಂಡಿವೆ ಎಂದು ಹಿರಿಯ ಪತ್ರಕರ್ತ ಮಂಡಿಬೆಲೆ ರಾಜಣ್ಣ ಹೇಳಿದರು.

ಪಟ್ಟಣದ ಚಿಕ್ಕಬಳ್ಳಾಪುರ ರಸ್ತೆಯಲ್ಲಿರುವ ಶ್ರೀ ರಂಗ ಕ್ಷೇತ್ರದ ಶ್ರೀ ರಂಗನಾಥ ಸ್ವಾಮಿ ಸನ್ನಿಧಿಯಲ್ಲಿ, ಶ್ರೀರಂಗ ಗೀತಾ ಸತ್ಸಂಗ ಸೇವಾ ಬಳಗದ ವತಿಯಿಂದ ಆಯೋಜಿಸಿದ್ದ 8ನೇ ಕಾರ್ಯಕ್ರಮ ಹಾಗೂ ಶ್ರೀಕೃಷ್ಣ ಯತೀಂದ್ರ ಸತ್ಸಂಗ ಸೇವಾ ಟ್ರಸ್ಟ್ ವತಿಯಿಂದ 34ನೇ ಗುರುಪಾದುಕಾ ಪೂಜೆಯಲ್ಲಿ ಅವರು ಮಾತನಾಡಿದರು.

ಭಕ್ತಿ, ಅನುಭವ, ಯೋಗರಹಸ್ಯ ಮತ್ತು ಸಾಮಾಜಿಕ ವಿಮರ್ಶೆ ಅವರ ಸಾಹಿತ್ಯದ ಜೀವಾಳ. ಹುಟ್ಟಿನ ಆಧಾರದ ಮೇಲೆ ಮಾಡುವ ಜಾತಿ ಪದ್ಧತಿಯನ್ನು ಕಟುವಾಗಿ ಟೀಕಿಸಿದ ಅವರು, ಬ್ರಾಹ್ಮಣ-ಶೂದ್ರ ಎಂಬ ಭೇದವನ್ನು ನಿರಾಕರಿಸಿದರು ಎಂದರು.ತಾಲ್ಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ಸಿ. ಶ್ರೀನಿವಾಸ್ ಮಾತನಾಡಿದರು. ಸಂಗೀತ ನಿರ್ದೇಶಕ ವಿ.ಎಂ.ನಾಯ್ಡು, ಮುನಿರಾಜು, ಟಿ.ಮಹಾತ್ಮಾಂಜನೇಯ, ನರಸಿಂಹಪ್ಪ, ಮುನಿರಾಜು, ರಾಮಪ್ಪ, ಶ್ರೀಮತಿ ನಾಗರತ್ನ ಅವರಿಂದ ಭಕ್ತಿಗೀತೆಗಳ ಕಾರ್ಯಕ್ರಮ ನಡೆಯಿತು.

ಸಮಾಜ ಸೇವಕ ಕೇಶವ, ಪತ್ರಕರ್ತ ಜೆ.ಆರ್. ಮುನಿವೀರಣ್ಣ, ಪ್ರಧಾನ ಕಾರ್ಯದರ್ಶಿ ಎ. ಮಧು, ರಾಮದಾಸ್, ವಿ.ಎನ್.ವೆಂಕಟೇಶ್, ಅನಿತಾ ಇದ್ದರು.



ಆರೋಗ್ಯ ನಿರ್ಲಕ್ಷಿಸದಿರಿ: ಅಂಬಿಕಾ

ರಾಮನಗರ: ಕುಟುಂಬದ ಮತ್ತು ಕೃಷಿ ಜವಾಬ್ದಾರಿಗಳ ನಡುವೆ ಮಹಿಳೆಯರು ತಮ್ಮ ಆರೋಗ್ಯವನ್ನು ನಿರ್ಲಕ್ಷಿಸಬಾರದು ಎಂದು ಕೃಷಿ ಇಲಾಖೆ ಜಂಟಿ ಕೃಷಿ ನಿರ್ದೇಶಕಿ ಅಂಬಿಕಾ ತಿಳಿಸಿದರು.

ನಗರದ ಪಶುವೈದ್ಯಕೀಯ ಜಿಲ್ಲಾ ತರಬೇತಿ ಕೇಂದ್ರದಲ್ಲಿ ಕೇಂದ್ರ ಪುರಸ್ಕೃತ ಆತ್ಮ ಯೋಜನೆಯಡಿ ಮಹಿಳಾ ಕಿಸಾನ್ ದಿವಸ್ ಅಂಗವಾಗಿ ರೈತ ಮಹಿಳೆಯರಿಗಾಗಿ ನಡೆದ ಕಿಸಾನ್ ಗೋಷ್ಠಿ ಕಾರ್ಯಕ್ರಮದಲ್ಲಿ ಮಾತನಾಡಿದರು.

ಮಹಿಳೆಯರು ಇಂದು ಎಲ್ಲಾ ರಂಗದಲ್ಲಿಯೂ ಛಾಪು ಮೂಡಿಸಿದ್ದು ಕೃಷಿಯಲ್ಲಿ ಅತ್ಯಂತ ಯಸಸ್ಸು ಕೂಡ ಕಂಡಿದ್ದಾರೆ. ತಮ್ಮ ಕುಟುಂಬ ನಿರ್ವಹಣೆ ಜೊತೆಗೆ ಕೃಷಿ ಚಟುವಟಿಕೆಗಳಲ್ಲಿಯೂ ಮಹತ್ವದ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಮಹಿಳೆಯರು ತಮ್ಮ ಆರೋಗ್ಯದ ಕಾಳಜಿ ವಹಿಸುವುದರೊಂದಿಗೆ ಉತ್ತಮ ಜೀವನಶೈಲಿಯನ್ನು ಅಳವಡಿಸಿಕೊಳ್ಳಬೇಕು.

ಕೃಷಿಯಲ್ಲಿ ಆಧುನಿಕತೆ ಮೈಗೂಡಿಸಿಕೊಂಡರೆ ಯಶಸ್ಸು ಕಾಣುವ ಜೊತೆಗೆ ಆರ್ಥಿಕತೆಯೂ ಉತ್ತಮವಾಗಲಿದೆ ಎಂದು ತಿಳಿಸಿದರು. ಸಹಾಯಕ ಜಂಟಿ ಕೃಷಿ ನಿರ್ದೇಶಕಿ ಅಂಬಿಕಾ, ಕೃಷಿ ವಿಜ್ಞಾನಿ ಡಾ.ಸುಶ್ಮಿತಾ, ಕೃಷಿ ವಿಜ್ಞಾನಿ ಡಾ.ತಾರಿಣಿ ಮಾತನಾಡಿದರು. ಸಹಾಯಕ ಕೃಷಿ ನಿರ್ದೇಶಕಿ ಶಶಿಕಲಾ, ಸಹಾಯಕ ಕೃಷಿ ನಿರ್ದೇಶಕ ಪ್ರಮೋದ್ ಕುಮಾರ್, ಪ್ರಗತಿಪರ ರೈತ ಮಹಿಳೆಯರಾದ ಪುಟ್ಟಗೌರಮ್ಮ, ನಿಂಗಮ್ಮ ಇತರರಿದ್ದರು.

ದಸರಾ ಮಹೋತ್ಸವಕ್ಕೆ ರಾಮನಗರದ ಕಲಾ ತಂಡ ಆಯ್ಕೆ

ಸಂ.ಕ. ಸಮಾಚಾರ, ರಾಮನಗರ

ಮೈಸೂರು ದಸರಾ ನಾಡಹಬ್ಬದಲ್ಲಿ ಜಿಲ್ಲೆಯ ಕಲಾವಿದರು ತಮ್ಮ ಸಾಂಪ್ರದಾಯಿಕ ಕಲೆಯ ಮೂಲಕ ಅತ್ಯುತ್ತಮ ಪ್ರದರ್ಶನ ನೀಡಬೇಕು. ದಸರಾ ಮಹೋತ್ಸವದಲ್ಲಿ ಉತ್ತಮ ಪ್ರದರ್ಶನದ ಮೂಲಕ ಜಿಲ್ಲೆಗೆ ಪ್ರಥಮ ಸ್ಥಾನ ಹಾಗೂ ಉತ್ತಮ ಹೆಸರು ತರುವಂತೆ ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಜಿ.ಎನ್. ಗಾಣಕಲ್ ನಟರಾಜು ಕಲಾವಿದರಿಗೆ ಶುಭ ಹಾರೈಸಿದರು.

ಮೈಸೂರು ದಸರಾ ಮಹೋತ್ಸವದಲ್ಲಿ ಗಾರುಡಿಗೊಂಬೆ ಪ್ರದರ್ಶನ ನೀಡಲು ಬೆಂಗಳೂರು ದಕ್ಷಿಣ (ರಾಮನಗರ) ಜಿಲ್ಲೆಯ ವೆಂಕಟೇಶ್ ಅವರ ನೇತೃತ್ವದ 40 ಕಲಾವಿದರ ತಂಡ ಆಯ್ಕೆಯಾಗಿದ್ದು, ಈ ಹಿನ್ನೆಲೆಯಲ್ಲಿ ಮೈಸೂರಿಗೆ ತೆರಳುತ್ತಿರುವ ಕಲಾವಿದರಿಗೆ ನಗರದ ಕೃಷ್ಣಸ್ಮೃತಿ ಕಲ್ಯಾಣ ಮಂಟಪದ ಬಳಿ ಇರುವ ಆಂಜನೇಯ ಸ್ವಾಮಿ ಆರ್ಚ್ ಬಳಿ ಚಾಲನೆ ನೀಡಿ ಮಾತನಾಡಿದರು.

ಸಾಂಸ್ಕೃತಿಕ ಪರಂಪರೆಯನ್ನು ರಾಜ್ಯಮಟ್ಟದಲ್ಲಿ ಪರಿಚಯಿಸಲು ದೊರೆತಿರುವ ಈ ಅವಕಾಶವನ್ನು ಕಲಾವಿದರು ಸದುಪಯೋಗಪಡಿಸಿಕೊಳ್ಳಬೇಕು ಎಂದು ಹೇಳಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಕೆ. ಸತೀಶ್ ಅವರು ಮಾತನಾಡಿ, ಕಲಾವಿದರು ತಮ್ಮ ಕಲಾ ಪ್ರತಿಭೆಯನ್ನು ಅದ್ಭುತವಾಗಿ ಪ್ರದರ್ಶಿಸುವ ಮೂಲಕ ಜಿಲ್ಲೆಗೆ ಕೀರ್ತಿ ತರಬೇಕು ಎಂದು ಆಶಿಸಿದರು.

ಕನ್ನಡ ಸಾಧಕ ಪ್ರಶಸ್ತಿಗೆ ಬಿ.ಟಿ.ರಾಜೇಂದ್ರ ಭಾಜನ

ರಾಮನಗರ: ತಾಲ್ಲೂಕಿನ ಬಿಳಗುಂಬ ಗ್ರಾಮದ ಪರಿಸರ ಪ್ರೇಮಿ ಬಿ.ಟಿ.ರಾಜೇಂದ್ರ ಅವರಿಗೆ ಅಖಿಲ ಭಾರತೀಯ ಸಾಹಿತ್ಯ ಪರಿಷತ್ ಕರ್ನಾಟಕ ಶ್ರೀರಾಮಶಾಲೆ, ದಕ್ಷಿಣ ಕನ್ನಡ ಜಿಲ್ಲೆಯ ಕಲ್ಲಡ್ಕನಿಂದ ಕೊಡ ಮಾಡುವ ಕನ್ನಡ ಸಾಧಕ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ನ.2 ರಂದು ಕಲ್ಲಡ್ಕದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಬಿ.ಟಿ. ರಾಜೇಂದ್ರ ಪ್ರಶಸ್ತಿ ಸ್ವೀಕರಿಸಲಿದ್ದಾರೆ. ಅವರು ಕಳೆದ 25 ವರ್ಷಗಳಿಂದ ಕನ್ನಡ ನಾಡು, ನುಡಿ, ಜಲ ಭಾಷೆಗಾಗಿ ಶ್ರಮಿಸಿದ್ದು,ಕನ್ನಡ ಸಾಹಿತ್ಯ ಪರಿಷತ್ ಸೇರಿದಂತೆ ಹಲವು ಸಂಘಟನೆಗಳಲ್ಲಿ ಶ್ರಮಿದ್ದಾರೆ. ಸಂಘಟನೆಗಳಲ್ಲದೆ ಪರಿಸರ ಪ್ರೇಮಿಯಾಗಿ ಗುರ್ತಿಸಿಕೊಂಡ ಅವರು ಬಿಳಗುಂಬ ಪ್ರೌಢಶಾಲೆ, ಪ್ರಾಥಮಿಕ ಶಾಲೆ, ದೇವಸ್ಥಾನ ಆವರಣ ಮತ್ತಿತರ ಸರ್ಕಾರಿ ಜಾಗಗಳಲ್ಲಿ ಗಿಡ ನೆಟ್ಟು ಪೋಷಣೆ ಮಾಡಿದ್ದಾರೆ. ಅವರ ಪರಿಸರ ಕಾಳಜಿ ಕನ್ನಡಪರ ಸೇವೆ ಮನಗಂಡು ಅಖಿಲ ಭಾರತೀಯ ಸಾಹಿತ್ಯ ಪರಿಷತ್ ಕಲ್ಲಡ್ಕದಲ್ಲಿ ಸನ್ಮಾನಿಸಿ ಗೌರವಿಸುತ್ತಿದೆ.

ರಂಗ ಕಲಾವಿದ ಮುನಿಸ್ವಾಮಿ ನಿಧನ

ಹೊಸಕೋಟೆ: ನಗರ ನಿವಾಸಿ ರಂಗಭೂಮಿ ಕಲಾವಿದರಾದ ಎಲ್. ಮುನಿಸ್ವಾಮಿ (84)

ವಯೋಸಹಜ ಖಾಯಿಲೆಯಿಂದ ಶನಿವಾರ ನಿಧನರಾದರು. ಅವರಿಗೆ ಪತ್ನಿ, ಇಬ್ಬರು ಪುತ್ರರು, ಮೂವರು ಪುತ್ರಿಯರು ಇದ್ದಾರೆ ಅವರ ಜಮೀನಿನಲ್ಲಿ ಅಂತ್ಯಕ್ರಿಯೆ ನಡೆಯಿತು.

ಹೊಸಕೋಟೆ ತಾಲೂಕು ಕಲಾವಿದರ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳು, ಅಪಾರ ಸಂಖ್ಯೆಯಲ್ಲಿ ಕಲಾವಿದರು ಸಂತಾಪ ಸೂಚಿಸಿದ್ದಾರೆ.

ಸಂಗೀತ ನಿರ್ದೇಶಕ ಶ್ರೀದೇವ ನಿಧನಕ್ಕೆ ಮಂಜುನಾಥ ಸಂತಾಪ

ಅತ್ತಿಬೆಲೆ: ದಕ್ಷಿಣ ಭಾರತದ ಖ್ಯಾತ ಸಂಗೀತ ನಿರ್ದೇಶಕ ಶ್ರೀದೇವ ನಿಧನವಾಗಿರುವುದು ಸಂಗೀತ ಮತ್ತು ಚಿತ್ರರಂಗಕ್ಕೆ ಅಪಾರ ನಷ್ಟವಾಗಿದೆ ಎಂದು ಕನ್ನಡ ಜಾಗೃತಿ ವೇದಿಕೆ ರಾಜ್ಯಾಧ್ಯಕ್ಷ ಕೆ.ಮಂಜುನಾಥ ದೇವ ಸಂತಾಪ ಸೂಚಿಸಿದ್ದಾರೆ.

ಶ್ರೀಯುತರು ಕನ್ನಡದಲ್ಲಿ ಕರ್ನಾಟಕ ರತ್ನ ಡಾ.ವಿಷ್ಣುವರ್ಧನ್ ಅವರು ನಟಿಸಿದ ಕೋಟಿಗೊಬ್ಬ, ಸಿಂಹಾದ್ರಿಯ ಸಿಂಹ, ವಿಷ್ಣುಸೇನಾ, ಕದಂಬ, ರಾಜನರಸಿಂಹ ಚಿತ್ರಗಳಿಗೆ ಎಂದು ಮರೆಯಲಾಗದ ಸಂಗೀತವನ್ನು ನೀಡಿದ್ದಾರೆ. ಹುಟ್ಟುಹಬ್ಬ, ರಸಮಂಜರಿ ಕಾರ್ಯಕ್ರಮ, ವಿವಾಹ ಸಮಾರಂಭ ಮತ್ತು ಕನ್ನಡ ನಾಡು ನುಡಿ ಕಾರ್ಯಕ್ರಮಗಳಲ್ಲಿ ಕದಂಬ ಸೇರಿದಂತೆ ಹಲವು ಸಿನಿಮಾಗಳ ಹಾಡುಗಳು ರಾಜ್ಯದ ಮೂಲೇ ಮೂಲೆಗಳಲ್ಲಿ ಸದಾ ಪ್ರತಿನಿತ್ಯ ಪ್ರತಿಧ್ವನಿಸುತ್ತಿರುತ್ತದೆ.

ರಮೇಶ್ ಅರವಿಂದ ಅವರ ಅಭಿನಯದ ಅಮೃತವರ್ಷಿಣಿ ಚಿತ್ರಕ್ಕೆ ನೀಡಿದ ಮಧುರವಾದ ಸಂಗೀತಕ್ಕೆ ಫಿಲಂಫೇರ್ ಪ್ರಶಸ್ತಿಯು ಸಹ ಲಭಿಸಿದ್ದು, ಅವರ ಸಂಗೀತ ಎಂದಿಗೂ ಅಜರಾಮರವಾಗಿರುತ್ತಾರೆ ಎಂದು ಸಂತಾಪಸೂಚಿಸಿದರು.

WIZZMONI FINANCIAL SERVICES LIMITED
(formerly Unimoni Financial Services Limited)
RO: N.G. 12 & 13 Ground Floor, North Block, Manipal Centre, Dickenson Road, Bangalore - 560 042. CIN No. U85110KA1995PLC018175

PUBLIC NOTICE

ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ, **ವಿಜ್‌ಮೋನಿ ಫೈನಾನ್ಷಿಯಲ್ ಸರ್ವೀಸಸ್ ಲಿಮಿಟೆಡ್ (ಈ ಹಿಂದೆ ಯುನಿಮೋನಿ ಫೈನಾನ್ಷಿಯಲ್ ಸರ್ವೀಸಸ್ ಲಿಮಿಟೆಡ್)** ನಿಂದ **ದಿನಾಂಕ : 23.10.2026** ರಂದು **ಬೆಳಗ್ಗೆ 10.00** ಗಂಟೆಗೆ ಈ ಕೆಳಗೆ ನೀಡಲಾದ ಸಂಬಂಧಿತ ಕೇಂದ್ರಗಳಲ್ಲಿ ಅಡವಿಟ್ಟ ಚಿನ್ನದ ಆಭರಣಗಳ ಹರಾಜನ್ನು ನಡೆಸಲಾಗುವುದು. ಹರಾಜಾಗಲಿರುವ ಚಿನ್ನದ ಆಭರಣಗಳು ಬಾಕಿ ಪಾವತಿಸಲು ವಿಫಲರಾದ ನಮ್ಮ ವಿವಿಧ ಗ್ರಾಹಕರ ಸಾಲ ಖಾತೆಗಳಿಗೆ ಸೇರಿವೆ. ನಮ್ಮ ಹರಾಜಿನ ಸೂಚನೆಗಳನ್ನು, ಈ ಸಾಲಗಾರರಿಗೆ ಸರಿಯಾಗಿ ನೀಡಲಾಗಿದೆ. ಹರಾಜಾಗಲಿರುವ ಚಿನ್ನದ ಆಭರಣಗಳು ಶಾಖೆಯ ಹೆಸರಿನೊಂದಿಗೆ ಕೆಳಗೆ ಉಲ್ಲೇಖಿಸಲಾದ ನಮ್ಮ ವಿವಿಧ ಗ್ರಾಹಕರ ಮಿತಿ ಮೀರಿದ ಸಾಲ ಖಾತೆಗಳಿಗೆ ಸೇರಿವೆ.

Auction Centre Address & Loan Nos: BANGALORE - INDIRA NAGAR (BAN - FIRST FLOOR, CHIRAG BUILDINGNO 542, CMH ROAD, NEAR INDIRANAGAR METRO STATION,Contact:9980669710) 2323608, 2324244, 2324455.

(Reserves the right to alter the number of accounts to be auctioned &/ postpone / cancel the auction without any prior notice)

---

kotak ಕೊಟಕ್ ಮಹೀಂದ್ರಾ ಬ್ಯಾಂಕ್ ಲಿಮಿಟೆಡ್ — ಆಸ್ತಿ ಮಾರಾಟಕ್ಕಾಗಿ ಆನ್‌ಲೈನ್ ಇ-ಹರಾಜು

ನೋಂದಾಯಿತ ಕಚೇರಿ: 27 ಬಿಕೆಸಿ, ಸಿ 27, ಜಿ-ಬ್ಲಾಕ್, ಬಾಂದ್ರಾ ಕುರ್ಲಾ ಕಾಂಪ್ಲೆಕ್ಸ್, ಬಾಂದ್ರಾ (ಇ) ಮುಂಬೈ, ಮಹಾರಾಷ್ಟ್ರ, ಪಿನ್ ಕೋಡ್-400 051, **ಶಾಖಾ ಕಚೇರಿ:** ಕೋಟಕ್ ಮಹೀಂದ್ರಾ ಬ್ಯಾಂಕ್ ಲಿಮಿಟೆಡ್. ನಂ.22, ಕೋಟಕ್ ಹೌಸ್, 2ನೇ ಮಹಡಿ, ಎಂಜಿ ರಸ್ತೆ, ಬೆಂಗಳೂರು, ಕರ್ನಾಟಕ-560001

ಸ್ಥಿರಾಸ್ತಿಗಳ ಮಾರಾಟಕ್ಕಾಗಿ ಮಾರಾಟ ಪ್ರಕಟಣೆ

ಆರ್ಥಿಕ ಸ್ವತ್ತಿನ ಭದ್ರತೆ ಮತ್ತು ಪುನರ್‌ನಿರ್ಮಾಣ ಮತ್ತು ಭದ್ರತಾ ಬಡ್ಡಿ ಕಾಯಿದೆ ಜಾರಿ, 2002ರ ಅಡಿಯಲ್ಲಿ ನಿಯಮ 8 (5) ಮತ್ತು ನಿಯಮ 9(1)ರ ಅಧಿ ನಿಯಮದ ನಿಬಂಧನೆಗಳನ್ನು ಓದಿಕೊಂಡಂತೆ ಭದ್ರತಾ ಬಡ್ಡಿ (ಜಾರಿ) ನಿಯಮ, 2002ರ ಅಡಿ ಸ್ಥಿರಾಸ್ತಿಗಳ ಮಾರಾಟಕ್ಕಾಗಿ ಇ-ಹರಾಜು ಮಾರಾಟ ಪ್ರಕಟಣೆ.

ಈ ಮೂಲಕ ತಿಳಿಸುವುದೇನೆಂದರೆ, "ದಿವಾನ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್ (DHFL) (ನಂತರ ಇದನ್ನು ಪಿರಾಮಲ್ ಕ್ಯಾಪಿಟಲ್ ಆಂಡ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್ - PCHFL/ಮೂಲ ಸಾಲದಾತರು ಸ್ವಾಧೀನಪಡಿಸಿಕೊಂಡರು) ತನ್ನ ಸಾಲವನ್ನು ಕೋಟಕ್ ಮಹೀಂದ್ರಾ ಬ್ಯಾಂಕ್ ಲಿಮಿಟೆಡ್‌ಗೆ (ಇನ್ನು ಮುಂದೆ "ಕೆಎಂಬಿಎಲ್/ಬ್ಯಾಂಕ್" ಎಂದು ಕರೆಯಲಾಗುತ್ತದೆ) ಹಸ್ತಾಂತರಿಸಿದ ನಂತರ, ಕೆಎಂಬಿಎಲ್‌ನ ಅಧಿಕೃತ ಅಧಿಕಾರಿಯು, ಸುರಕ್ಷಿತ ಸಾಲದಾತರ ಬಳಿ ಅಡಮಾನವಿರಿಸಲಾದ/ಭಾರ ಹೊರಿಸಲಾದ, ಕೆಳಗೆ ವಿವರಿಸಿರುವ ಸ್ಥಿರ ಆಸ್ತಿಯನ್ನು (ಇನ್ನು ಮುಂದೆ "ಸುರಕ್ಷಿತ ಆಸ್ತಿ" ಎಂದು ಕರೆಯಲಾಗುತ್ತದೆ) 11.08.2026 ರಂದು ಕೆಳಗೆ ವಿವರಿಸಲಾದ ಸ್ಥಿರ ಆಸ್ತಿಯ ಸ್ವಾಧೀನವನ್ನು ಪಡೆದುಕೊಂಡಿದ್ದಾರೆ. ಈ ಮೂಲಕ ಸೂಚನೆ ನೀಡುವುದೇನೆಂದರೆ, ಸಾಮಾನ್ಯವಾಗಿ ಸಾರ್ವಜನಿಕರಿಗೆ ಮತ್ತು ನಿರ್ದಿಷ್ಟವಾಗಿ ಸಾಲಗಾರ (ರು) ಮತ್ತು ಜಾಮೀನುದಾರ (ರು) ಶ್ರೀ ಮುನಿರಾಜು ಮತ್ತು ಶ್ರೀಮತಿ ಪದ್ಮಾ ಮಾನಸ್ ಅವರಿಂದ. ಪಡೆದ ಸಾಲದ ಖಾತೆ ಸಂಖ್ಯೆ: 15400001643;; ಅಡಿಯಲ್ಲಿರುವ ಮೊತ್ತ ರೂ. 30,56,221/- (ರೂಪಾಯಿ ಮೂವತ್ತು ಲಕ್ಷದ ಐವತ್ತಾರು ಸಾವಿರದ ಇನ್ನೂರ ಇಪ್ಪತ್ತೊಂದು ಮಾತ್ರ) 14.10.2026 ರಂತೆ ಪಾವತಿಯಾಗುವವರೆಗೆ ಭವಿಷ್ಯದಲ್ಲಿ ಅನ್ವಯಿಸುವ ಬಡ್ಡಿಯೊಂದಿಗೆ ವಸೂಲಾತಿಗಾಗಿ ಈ ಕೆಳಗಿನ ವಿವರ ಪ್ರಕಾರ ಸ್ವತ್ತನ್ನು "ಎಲ್ಲಿದೆಯೋ ಹಾಗೇ, "ಏನಿದೆಯೋ ಹಾಗೇ ಮತ್ತು "ಹೇಗಿದೆಯೋ ಹಾಗೇ ಆಧಾರದ ಮೇಲೆ ಸರ್ಫೇಸಿ ಕಾಯಿದೆ 2002ರ ನಿಬಂಧನೆಗಳ ಅಡಿಯಲ್ಲಿ ಇ-ಹರಾಜಿನ ಮೂಲಕ ಈ ಆಸ್ತಿಯನ್ನು ಮಾರಾಟ ಮಾಡಲು ಬ್ಯಾಂಕ್ ನಿರ್ಧರಿಸಿದೆ.

ನಿರ್ದಿಷ್ಟ	ವಿವರ
ಹರಾಜಿನ ದಿನಾಂಕ	27.11.2026
ಹರಾಜಿನ ಸಮಯ	12:00 PM ರಿಂದ 1:00 PM ರವರೆಗೆ 5 ನಿಮಿಷಗಳ ಅನಿಯಮಿತ ವಿಸ್ತರಣೆಯೊಂದಿಗೆ
ಮೀಸಲು ಬೆಲೆ	ರೂ. 7,20,000/- (ರೂಪಾಯಿ ಏಳು ಲಕ್ಷ ಇಪ್ಪತ್ತು ಸಾವಿರ ಮಾತ್ರ)
ಮುಂಗಡ ಠೇವಣಿ ಹಣ (EMD)	ರೂ. 72,000/- (ರೂಪಾಯಿ ಎಪ್ಪತ್ತೆರಡು ಸಾವಿರ ಮಾತ್ರ)

EMD ಅನ್ನು KYC ಯೊಂದಿಗೆ ಸಲ್ಲಿಸಲು ಕೊನೆಯ ದಿನಾಂಕ 26.11.2026ರಂದು ಸಂಜೆ 6:00 PM ರವರೆಗೆ (IST)

ಭದ್ರತಾ ಆಸ್ತಿಯ ವಿವರಣೆ : ಸ್ವತ್ತಿನ ಎಲ್ಲ ಭಾಗ ವಿಭಾಗ ಸೇರಿ ಕೋಲಾರ ಜಿಲ್ಲೆ, ಕೋಲಾರ, ಉಪ ಆಯುಕ್ತರವರ ಕಚೇರಿಯ ಆದೇಶ ಸಂಖ್ಯೆ ALN.SR.7/2016-17, ದಿನಾಂಕ: 01-02-2017 ರ ಅನ್ವಯ ಭೂ ಪರಿವರ್ತನೆಗೊಂಡ (alienated) ಸರ್ವೆ ನಂ. 139/2 ರಲ್ಲಿ ಬರುವ, ಪೂರ್ವ-ಪಶ್ಚಿಮವಾಗಿ 12.192 ಮೀಟರ್‌ಗಳು (ಅಥವಾ 40 ಅಡಿ) ಮತ್ತು ಉತ್ತರ-ದಕ್ಷಿಣವಾಗಿ 9.144 ಮೀಟರ್‌ಗಳು (ಅಥವಾ 30 ಅಡಿ) ಅಳತೆಯ ನಿವೇಶನ ಸಂಖ್ಯೆ 2; ಇದರ ಪಿ.ಪಿ. ಖಾತೆ ಸಂಖ್ಯೆ 238/2 ಮತ್ತು ಆಸ್ತಿ ಸಂಖ್ಯೆ 151900200600929200027 ಆಗಿದ್ದು, ಇದು ಬಂಗಾರಪೇಟೆ ತಾಲೂಕು, ಬೇತಮಂಗಲ ಹೋಬಳಿ, ಕದಿರಗೊಂಡನಕೋಟೆ ಗ್ರಾಮದಲ್ಲಿ ನೆಲೆಗೊಂಡಿದೆ. ಈ ಆಸ್ತಿಯ ಚಕ್ಕುಬಂದಿ ಹೀಗಿವೆ: ಪೂರ್ವಕ್ಕೆ - ಮಂಜು ಅವರ ಆಸ್ತಿ, ಪಶ್ಚಿಮಕ್ಕೆ - ರಸ್ತೆ, ಉತ್ತರಕ್ಕೆ - ನಿವೇಶನ ಸಂಖ್ಯೆ 1, ದಕ್ಷಿಣಕ್ಕೆ - ನಿವೇಶನ ಸಂಖ್ಯೆ 3. ಈ ಆಸ್ತಿಗೆ ಸಂಬಂಧಿಸಿದ ಎಲ್ಲಾ ಹಕ್ಕುಗಳು ಇದರೊಂದಿಗೆ ಸೇರಿರುತ್ತವೆ.

ತಿಳಿದಿರುವ ಹೊರೆಗಳು: ಇಲ್ಲ

ಈ ಮೂಲಕ ಸಾಲಗಾರರಿಗೆ ತಿಳಿಸುವುದೇನೆಂದರೆ ಕಾಯಿದೆಯ ಸೆಕ್ಷನ್ 13 ರ ಉಪವಿಭಾಗ 8ರ ನಿಬಂಧನೆಯಲ್ಲಿ ಭದ್ರತಾ ಆಸ್ತಿಯನ್ನು ಪಡೆದುಕೊಳ್ಳಬಹುದು. ಯಾವುದೇ ಕಾರಣಕ್ಕೂ ಇಲ್ಲಿ ನಿಗದಿತ ಹರಾಜು ವಿಫಲವಾದಲ್ಲಿ ಯಾವುದಾದರೂ ಕಾರಣದಿಂದ ಭದ್ರತಾ ಸಾಲದಾತರು ಖಾಸಗಿ ಒಪ್ಪಂದದ ಮೂಲಕ ಮಾರಾಟದ ಭದ್ರತಾ ಬಡ್ಡಿಯನ್ನು ಜಾರಿಗೊಳಿಸಬಹುದು ಎಂಬುದನ್ನು ನಿರ್ದಿಷ್ಟವಾಗಿ ಸಾಲಗಾರರಿಗೆ ತಿಳಿಸಲಾಗಿದೆ.

ಮಾರಾಟದಲ್ಲಿರುವ ಸ್ವತ್ತುಗಳ ಕುರಿತು ಯಾವುದೇ ಸ್ಪಷ್ಟೀಕರಣ / ಅವಶ್ಯಕತೆ ಇದ್ದಲ್ಲಿ, ಬಿಡ್ದಾರರು ಶ್ರೀ ನಾಗರಾಜ್ ಕೆ (ಮೊ-+918296621749)/ ಶ್ರೀ ವಸಂತ ಕುಮಾರ್ ಎಚ್ ಪಿ (+919964722505) ಬಿಡ್ದಾರರು ಬ್ಯಾಂಕಿನ ಐವಿಆರ್ ಸಂಖ್ಯೆ (+91-9152219751) ಅನ್ನು ಸಹ ಸಂಪರ್ಕಿಸಬಹುದು. ಮಾರಾಟದ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ, ದಯವಿಟ್ಟು ಬ್ಯಾಂಕಿನ ವೆಬ್‌ಸೈಟ್‌ನಲ್ಲಿ ಅಂದರೆ ತಿತಿತಿ.ಇಾಣಚಿಇ.ಛಿಂ ಮತ್ತು/ಅಥವಾ http://bankauctions.in/ ನಲ್ಲಿ ಒದಗಿಸಲಾದ https://www.kotak.com/en/bank-auctions.html ಲಿಂಕ್ ಅನ್ನು ನೋಡಿ.

ಸ್ಥಳ: ಕರ್ನಾಟಕ, ಕೋಲಾರ
ದಿನಾಂಕ: 18.10.2026

ಕೊಟಕ್ ಮಹೀಂದ್ರಾ ಬ್ಯಾಂಕ್ ಲಿಮಿಟೆಡ್.
ಅಧಿಕೃತ ಅಧಿಕಾರಿ

ಕ್ಯಾನ್ ಫಿನ್ ಹೋಮ್ಸ್ ಲಿ.,

Can Fin Homes Ltd (Sponsor: CANARA BANK) HOME LOANS + DEPOSITS

ಬನ್ನೇರುಘಟ್ಟ ರಸ್ತೆ ಶಾಖೆ

ನಂ. 1 ಮತ್ತು 2, 2ನೇ ಮಹಡಿ, 1ನೇ ಅಡ್ಡರಸ್ತೆ, ರಾಮಕೃಷ್ಣಪ್ಪ ಲೇಔಟ್, ಗೊಟ್ಟಿಗೆರೆ, ಬೆಂಗಳೂರು - 560 083,
ಫೋನ್ : 080-25780611/7625013269
Email:bannerghatta@canfinhomes.com
CIN:L85110KA1987PLC008699Karnataka.

ಸ್ವಾಧೀನ ಸೂಚನೆ (ಸ್ಥಿರಾಸ್ತಿಗಾಗಿ) ನಿಯಮ 8(1)

ಕೆಳಸಹಿದಾರರು, **ಕ್ಯಾನ್ ಫಿನ್ ಹೋಮ್ಸ್ ಲಿ.,** ಇದರ ಅಧಿಕಾರ ಹೊಂದಿದ ಅಧಿಕೃತ ಅಧಿಕಾರಿಯಾಗಿದ್ದು ಸೆಕ್ಯೂರಿಟೈಜೇಷನ್ ಆಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಶಿಯಲ್ ಅಸೆಟ್ಸ್ ಆಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆಕ್ಟ್ 2002ರ ಅನ್ವಯ ಮತ್ತು 2002 ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮಗಳ ಅನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸದರಿ ಸೂಚನೆ ತಲುಪಿದ ದಿನಾಂಕದಿಂದ 60 ದಿನಗಳ ಒಳಗೆ ಸೂಚನೆಯಲ್ಲಿ ತಿಳಿಸಿರುವ ಮೊಬಲಗು **ರೂ.19,27,948/-** (ರೂಪಾಯಿ ಹತ್ತೊಂಬತ್ತು ಲಕ್ಷ ಇಪ್ಪತ್ತೇಳು ಸಾವಿರ ಒಂದು ನೂರ ನಲವತ್ತೆಂಟು ಮಾತ್ರ) ಪೂರ್ತಿ ಪಾವತಿಯ ದಿನಾಂಕದವರೆಗಿನ ಬಡ್ಡಿಯನ್ನು ಮರು ಪಾವತಿಮಾಡಲು ಸಾಲಗಾರರಾದ **ಶ್ರೀ ನಟರಾಜ್ ಟಿ., ಶ್ರೀಮತಿ ವಾಣಿ ಎನ್.,** ಮತ್ತು **ಶ್ರೀ ಶಿವಕುಮಾರ್** (ಜಾಮೀನುದಾರರು), ಇವರಿಗೆ ದಿನಾಂಕ **29.11.2025** ರಂದು ತಗಾದೆ ಸೂಚನೆಯನ್ನು ನೀಡಲಾಗಿತ್ತು.

ಸಾಲಗಾರರು ಸಾಲದ ಹಣವನ್ನು ಮರುಪಾವತಿ ಮಾಡಲಿಲ್ಲವಾದುದರಿಂದ, ಸಾಲಗಾರರಿಗೆ ಮತ್ತು ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಸೂಚಿಸುವುದೇನೆಂದರೆ, ಆಕ್ಟ್‌ನ ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮಗಳು 2002ರ ಸೆಕ್ಷನ್ 13ರ ಸಬ್ ಸೆಕ್ಷನ್ (4)ರ ನಿಯಮ 8 ರಲ್ಲಿ ಪ್ರದತ್ತ ಅಧಿಕಾರದನ್ವಯ ದಿನಾಂಕ **14.10.2026** ರಂದು ಕೆಳಗೆ ವಿವರಿಸಿದ ಸ್ವತ್ತನ್ನು ಕೆಳಸಹಿದಾರರು ಸ್ವಾಧೀನಪಡಿಸಿಕೊಂಡಿರುತ್ತಾರೆ.

ಸಾಲಗಾರರ ಗಮನಕ್ಕೆ ತರುವುದೇನೆಂದರೆ ಭದ್ರತಾ ಸ್ವತ್ತುಗಳನ್ನು ಹಿಂಪಡೆಯುವ ಅವಕಾಶ ಕಾಯಿದೆಯ ಸೆಕ್ಷನ್ 13ರ ಸಬ್ ಸೆಕ್ಷನ್ (8)ರ ಅನ್ವಯ ಇರುತ್ತದೆ.

ನಿರ್ದಿಷ್ಟವಾಗಿ ಸಾಲಗಾರರಿಗೆ ಮತ್ತು ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಎಚ್ಚರಿಸುವುದೇನೆಂದರೆ, ಯಾರೂ ಸದರಿ ಸ್ವತ್ತುಗಳ ಬಗ್ಗೆ ವ್ಯವಹರಿಸಬಾರದು ಮತ್ತು ಸದರಿ ಸ್ವತ್ತುಗಳ ಬಗ್ಗೆ ಯಾವುದೇ ವ್ಯವಹಾರ ನಡೆಸಿದ್ದೇ ಆದರೆ, ಅದು **ಕ್ಯಾನ್ ಫಿನ್ ಹೋಮ್ಸ್ ಲಿ., (ಸಿಎಫ್‌ಹೆಚ್‌ಎಲ್)** ಇವರಿಗೆ ಕೆಳಗೆ ಸೂಚಿಸಿರುವಂತೆ ಬರಬೇಕಾದ ಬಾಕಿ ಮೊತ್ತ **ರೂ.19,27,948/-** (ರೂಪಾಯಿ ಇಪ್ಪತ್ತೆರಡು ಲಕ್ಷ ಹತ್ತೊಂಬತ್ತು ಸಾವಿರ ಒಂದು ನೂರ ಇಪ್ಪತ್ತೈದು ಮಾತ್ರ ಮಾತ್ರ) ಮತ್ತು ಬಡ್ಡಿ ಮತ್ತು ಇತರ ಸಾಂದರ್ಭಿಕ ವೆಚ್ಚಗಳಿಗೆ ಋಣ ಬಾಧ್ಯವಾಗಿರುತ್ತದೆ.

ಸ್ಥಿರಾಸ್ತಿಯ ವಿವರ :

ಬೆಂಗಳೂರು ಉತ್ತರ ತಾಲೂಕು, ದಾಸನಪುರ ಹೋಬಳಿ, ಹನುಮಂತಸಾಗರ ಗ್ರಾಮ, ನಿವೇಶನ ನಂ. 44, ಪಿಐಡಿ ನಂ. 150200400 501420082 , ಅಸೆಸ್‌ಮೆಂಟ್ ನಂ. 11/2, ಖಾತಾ ನಂ. 11/2/44 ಅಳತೆ ಪೂರ್ವದಿಂದ ಪಶ್ಚಿಮಕ್ಕೆ: 38 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ 20 ಅಡಿ ಒಟ್ಟು 760 ಚದರ ಅಡಿ ಈ ಆಸ್ತಿಯ ಚಕ್ಕುಬಂದಿ: ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ಖಾಸಗಿ ಆಸ್ತಿ, ಉತ್ತರಕ್ಕೆ : ನಿವೇಶನ ನಂ. 45, ದಕ್ಷಿಣಕ್ಕೆ: ನಿವೇಶನ ನಂ. 43.

ದಿನಾಂಕ :17.10.2026
ಸ್ಥಳ : ಬೆಂಗಳೂರು

ಸಹಿ/-
ಅಧಿಕೃತ ಅಧಿಕಾರಿ
ಕ್ಯಾನ್‌ಫಿನ್ ಹೋಮ್ಸ್ ಲಿ.,

IN THE COURT OF THE ADDL. CIVIL JUDGE & J.M.F.C AT DEVANAHALLI
O.S.No.450/2007

BETWEEN: Smt. M. Rajamma ...PLAINTIFF
AND: Sri. B. M. Mariyappa & Ors ...DEFENDANTS

Defendant No.4: 4(a) Sri.Sandeep.R, Aged about 28 years, S/o.Late.Rajanna, **4(b).Smt.Yogitha.R,** Aged about 25 years, D/o.Late.Rajanna, Both R/at.Bettahalasur Village, Jala Hobli, Bengaluru North Taluk.

Whereas the plaintiff filed the above suit for the relief of specific the performance of Contract against you with respect to the Kn.No.386/386/361 formed in Sy.No.4 measuring to an extent of 40x82, of Bettahalasur Village, Jala Hobli, Bangalore North Taluk and on the death of the defendant No.4, the plaintiff filed an application to bring you addressee Nos.1 and 2 as his legal heirs and you being the legal heris of the deceased defendant No.4, you are summoned/directed to appear in court, in person or by pleader duly instructed and able to answer all the material questions relating to the suit on **11-11-2026** at 11:00 A.M to answer the claim of the plaintiff.

Take summons/notices that in default in your appearance on the day before mentioned the suit will be heard and determined in your absence.

Given my sign and seal of the court on 14-10-2026.

By order of the court, Chief Ministerial Officer, Civil Judge & JMFC Court at devanahalli.

Sri. A.R.SREENIVASA REDDY, Advocate
Off.No.5, M.R. Complex, Sulibele Road, Devanahalli Town.

---

pnb ಪಂಜಾಬ್ ನ್ಯಾಷನಲ್ ಬ್ಯಾಂಕ್

ಆಸ್ತಿ ವಸೂಲಾತಿ ನಿರ್ವಹಣಾ ಶಾಖೆ (ಎಆರ್‌ಎಂಬಿ): ನಂ.26-27, ರಹೇಜಾ ಟವರ್ಸ್, ಈಸ್ಟ್ ವಿಂಗ್ (1ನೇ ಮಹಡಿ), ಎಂ.ಜಿ.ರಸ್ತೆ, ಬೆಂಗಳೂರು-560001.
ಇ-ಮೇಲ್: cs8191@pnb.bank.in

ಸ್ಥಿರಾಸ್ತಿಗಳ ಮಾರಾಟಕ್ಕಾಗಿ ಮಾರಾಟ ಪ್ರಕಟಣೆ

ಸೆಕ್ಯೂರಿಟಿ ಇಂಟರೆಸ್ಟ್ ಆಕ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002ರ ನಿಯಮ 8(6) ಷರತ್ತನ್ನು ಓದಿಕೊಂಡಂತೆ ಸೆಕ್ಯೂರಿಟೈಜೇಶನ್ ಅಂಡ್ ರೀಕನ್‌ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆಕ್ಟ್ (ಸರ್ಫೇಸಿ) 2002 ಅಡಿಯಲ್ಲಿ ಸ್ಥಿರಾಸ್ತಿಯ ಮಾರಾಟಕ್ಕೆ ಇ-ಹರಾಜಿನ ಮಾರಾಟ ಪ್ರಕಟಣೆ.

ಸಮಸ್ತ ಸಾರ್ವಜನಿಕರಿಗೆ ಮತ್ತು ನಿರ್ದಿಷ್ಟವಾಗಿ ಸಾಲಗಾರರು ಮತ್ತು ಜಾಮೀನುದಾರರಿಗೆ ಈ ಮೂಲಕ ಸೂಚಿಸುವುದೇನೆಂದರೆ ಕೆಳಗೆ ವಿವರಿಸಿರುವ ಸಾಲ ಪಡೆದವರಿಂದ ಬ್ಯಾಂಕಿಗೆ ಅಡಮಾನ ಮಾಡಿದ ಸ್ಥಿರಾಸ್ತಿಯನ್ನು, ಬ್ಯಾಂಕಿನ ಅಧಿಕೃತ ಅಧಿಕಾರಿಯವರು/ಸಾಲ ನೀಡಿದವರು ರಚನಾತ್ಮಕವಾಗಿ/ಭೌತಿಕವಾಗಿ/ಸಾಂಕೇತಿಕವಾಗಿ ಸ್ವಾಧೀನಪಡಿಸಿಕೊಂಡಿದ್ದು ಈ ಸ್ಥಿರಾಸ್ತಿಯನ್ನು ಸಾಲದ ಬಾಕಿಯ ವಸೂಲಾತಿಗಾಗಿ "ಎಲ್ಲಿದೆಯೋ ಹಾಗೆಯೇ ರೀತಿಯಲ್ಲಿ", "ಹೇಗಿದೆಯೋ ಹಾಗೆಯೇ " ಮತ್ತು "ಏನಿದೆಯೋ ಹಾಗೆಯೇ ಆಧಾರದಲ್ಲಿ" ಕೆಳಗೆ ನೀಡಿರುವ ಕೋಷ್ಟಕದಲ್ಲಿ ತಿಳಿಸಿರುವ ದಿನಾಂಕದಂದು ಮಾರಾಟ ಮಾಡಲಾಗುವುದು. ಸಂಬಂಧಿತ ಸಾಲಗಾರ(ರು) ಮತ್ತು ಜಾಮೀನುದಾರ(ರು)ರಿಂದ ಬ್ಯಾಂಕ್/ಭದ್ರತಾ ಸಾಲದಾತರಿಗೆ ಬರಬೇಕಾದ ಬಾಕಿಯನ್ನು ವಸೂಲಿ ಮಾಡಲು. ಸಂಬಂಧಿತ ಆಸ್ತಿಗಳಿಗೆ ಸಂಬಂಧಿಸಿದ ಕನಿಷ್ಠ ಮಾರಾಟ ಬೆಲೆ ಮತ್ತು ಮುಂಗಡ ಠೇವಣಿ ಮೊತ್ತವನ್ನು ಕೆಳಗಿನ ಕೋಷ್ಟಕದಲ್ಲಿ ನಮೂದಿಸಲಾಗಿದೆ.

ಹರಾಜಿನ ದಿನಾಂಕ : 03.11.2026, ಸಮಯ : ಬೆಳಗ್ಗೆ 11:00 ರಿಂದ ಮಧ್ಯಾಹ್ನ 03:00

ಕ್ರ. ಸಂ	ಶಾಖೆಯ ಹೆಸರು, ಕಸ್ಟಮರ್ ಐಡಿ, ಖಾತೆ ಹೆಸರು, ಖಾತೆ ಸಂ. ವ್ಯವಹರಿಸುವ ಅಧಿಕಾರಿ ಸಂಪರ್ಕ ಸಂಖ್ಯೆ	ಸ್ಥಿರಾಸ್ತಿ ಸ್ವತ್ತುಗಳ ವಿವರಣೆ	ಎ) 13(2)ರಡಿ ದಿನಾಂಕ ಬಿ) 13(4)ರಡಿ ದಿನಾಂಕ ಸಿ) ಸ್ವಾಧೀನ ವಿಧ ಡಿ) ಬಾಕಿ ಮೊತ್ತ	ಎ) ಮೀಸಲು ಬೆಲೆ ಬಿ) ಇಎಂಡಿ ಸಿ) ಬಿಡ್ ಗುಣಾಂಕದ ಮೊತ್ತ
1.	ಶಾಖಾ ಕಛೇರಿ: ಇಜಿಎಲ್ ಬ್ಯುಸಿನೆಸ್ ಪಾರ್ಕ್, ದೊಮ್ಮಲೂರು (754700), ಕಲ್ಯಾಣ ಚಕ್ರವರ್ತಿ ಡಿ ಕಸ್ಟಮರ್ ಐಡಿ-**LEJ009050,** ಖಾತೆ ಸಂ. **754700NC00000527 & 754700NC00001243** ಮೊ. ಸಂಖ್ಯೆ: **9632588100**	ಎಲ್ಲಾ ಭಾಗ ಮತ್ತು ವಿಭಾಗಗಳೆಲ್ಲವೂ ಸೇರಿದಂತೆ ಬೆಂಗಳೂರು - 560100, ಆನೇಕಲ್ ತಾಲ್ಲೂಕು, ಕಾಮಸಂದ್ರ ಗ್ರಾಮದ ಸರ್ವೆ ನಂ. 104/1 ರಲ್ಲಿರುವ ನಿವೇಶನ ಸಂಖ್ಯೆಗಳು 13, 14, 15, 16, 17 ಮತ್ತು 18 ರಲ್ಲಿ ನೆಲೆಗೊಂಡಿರುವ ಆಸ್ತಿ; ನಿರ್ದಿಷ್ಟವಾಗಿ 'ಎಂವಿಎಸ್ ಪ್ರೈಡ್ ಅನೆಕ್ಸ್' ನ ಬ್ಲಾಕ್-ಸಿ, 4ನೇ ಮಹಡಿಯಲ್ಲಿರುವ ಫ್ಲಾಟ್ ಸಂಖ್ಯೆ 408 (ಸಾಯಿ ಶರಣ ಲೇಔಟ್, 11ನೇ ಕ್ರಾಸ್, ಫೇಸ್-2, ಅನಂತ ನಗರ, ಫೇಸ್-1, ಕಾಮಸಂದ್ರ, ಎಲೆಕ್ಟ್ರಾನಿಕ್ ಸಿಟಿ, ಬೆಂಗಳೂರು - 560100). ಈ ಆಸ್ತಿಯ ಒಟ್ಟು ವಿಸ್ತೀರ್ಣ 980 ಚದರ ಅಡಿಗಳು (ಇದರಲ್ಲಿ 320 ಚದರ ಅಡಿಗಳಷ್ಟು ಅವಿಭಜಿತ ಪಾಲು ಸೇರಿದೆ). ಇದರ ಚಕ್ಕುಬಂಧಿಗಳು ಹೀಗಿವೆ: ಪೂರ್ವಕ್ಕೆ - ಬಯಲು ಪ್ರದೇಶ, ಪಶ್ಚಿಮಕ್ಕೆ - ಕಾರಿಡಾರ್ ಮತ್ತು ಫ್ಲಾಟ್ ಸಂಖ್ಯೆ 407, ಉತ್ತರಕ್ಕೆ - ಬಯಲು ಪ್ರದೇಶ, ಹಾಗೂ ದಕ್ಷಿಣಕ್ಕೆ - ಕಾರಿಡಾರ್ ಮತ್ತು ಬಯಲು ಪ್ರದೇಶ.	ಎ) 20.07.2018 ಬಿ) 05.02.2019 ಸಿ) ಭೌತಿಕ ಡಿ) ರೂ. 1,52,06,815.66 ಮತ್ತಷ್ಟು ಬಡ್ಡಿ ಮತ್ತು ಇತರೆ ಶುಲ್ಕಗಳು ಅಂದರೆ 01.10.2026 ರಿಂದ ಅನ್ವಯ.	ಎ) ರೂ. 47,94,000/- ಬಿ) ರೂ. 4,79,400/- ಸಿ) ರೂ. 50,000/-
2.	ಶಾಖಾ ಕಛೇರಿ: ಸದಾಶಿವ ನಗರ (106200) ನಂಜುಂಡಸ್ವಾಮಿ ಎನ್ & ಲಿಕಿತ್ ನಂಜುಂಡಸ್ವಾಮಿ ಕಸ್ಟಮರ್ ಐಡಿ_ **BOV001503** ಖಾತೆ ಸಂ: **106200NC00020736 & 106200990000959** ಮೊ.ಸಂ : **9632588100**	ಎಲ್ಲಾ ಭಾಗ ಮತ್ತು ವಿಭಾಗಗಳೆಲ್ಲವೂ ಸೇರಿದಂತೆ ಬೆಂಗಳೂರು-560054, ಕಾರ್ಪೋರೇಷನ್ ವಿಭಾಗ ಸಂಖ್ಯೆ-3, ಗೋಕುಲ 1ನೇ ಹಂತ, 1ನೇ ಫೇಸ್, 10ನೇ ಕ್ರಾಸ್‌ನಲ್ಲಿರುವ, ನಿವೇಶನ ಸಂಖ್ಯೆ-9 ಹಾಗೂ ಮುನಿಸಿಪಲ್ ಕಾರ್ಪೋರೇಷನ್ ಸಂಖ್ಯೆ-9 ಅನ್ನು ಹೊಂದಿರುವ ವಸತಿಯುತ ಆಸ್ತಿ; ಇದರ ವಿಸ್ತೀರ್ಣ 2060 ಚದರ ಅಡಿಗಳು (ಅನುಮೋದಿತ ನಕ್ಷೆಯ ಪ್ರಕಾರ ನಿವೇಶನದ ವಿಸ್ತೀರ್ಣ 2026 ಚದರ ಅಡಿಗಳು). ಇದರೊಂದಿಗೆ, ನೆಲ ಅಂತಸ್ತು ಸೇರಿದಂತೆ ಒಟ್ಟು 3 ಅಂತಸ್ತುಗಳನ್ನು (ಜಿ+2 ಮಹಡಿಗಳು) ಹೊಂದಿರುವ ಕಟ್ಟಡವಿದ್ದು, ಪ್ರತಿ ಅಂತಸ್ತಿನ ವಿಸ್ತೀರ್ಣ 825 ಚದರ ಅಡಿಗಳು ಮತ್ತು ಒಟ್ಟು ನಿರ್ಮಿತ ಪ್ರದೇಶ 2475 (825*3) ಚದರ ಅಡಿಗಳು. ಈ ಆಸ್ತಿಯು ಈ ಕೆಳಗಿನಂತೆ ಚಕ್ಕುಬಂಧಿಗಳನ್ನು ಹೊಂದಿದೆ: ಪೂರ್ವಕ್ಕೆ - ಶ್ರೀ ವೆಂಕಟಪ್ಪ ಅವರಿಗೆ ಸೇರಿದ ಆಸ್ತಿ, ಪಶ್ಚಿಮಕ್ಕೆ - ಖಾಸಗಿ ಆಸ್ತಿ, ಉತ್ತರಕ್ಕೆ - ರಾಮ ರೆಡ್ಡಿ ಅವರಿಗೆ ಸೇರಿದ ಆಸ್ತಿ ಮತ್ತು ದಕ್ಷಿಣಕ್ಕೆ - ರಸ್ತೆ. ಮಾಹಿತಿ ಬಹಿರಂಗಪಡಿಸುವಿಕೆ: ಮಾರಾಟ ಪತ್ರದ ಪ್ರಕಾರ ನಿವೇಶನದ ವಿಸ್ತೀರ್ಣವು 2060 ಚದರ ಅಡಿಗಳಷ್ಟಿದ್ದರೆ, ಅನುಮೋದಿತ ನಕ್ಷೆಯಲ್ಲಿ ಅದು 2026 ಚದರ ಅಡಿಗಳಷ್ಟಿದೆ.	ಎ) 03.04.2018 ಬಿ) 06.09.2018 ಸಿ) ಸಾಂಕೇತಿಕ ಡಿ) ರೂ. 1,87,10,934.60 ಮತ್ತಷ್ಟು ಬಡ್ಡಿ ಮತ್ತು ಇತರೆ ಶುಲ್ಕಗಳು ಅಂದರೆ 01.10.2026 ರಿಂದ ಅನ್ವಯ.	ಎ) ರೂ. 2,32,90,000/- ಬಿ) ರೂ. 23,29,000/- ಸಿ) ರೂ. 1,00,000/-
3.	ಶಾಖಾ ಕಛೇರಿ: ಮಲ್ಲೇಶ್ವರಂ (126100) ಲಿಕಿತ್ ಎಂಟರ್‌ಪ್ರೈಸಸ್ ಮಾಲೀಕರು: ಲಿಕಿತ್ ನಂಜುಂಡಸ್ವಾಮಿ ಕಸ್ಟಮರ್ ಐಡಿ_ **BOV010757** ಖಾತೆ ಸಂ: **126100ND00015741** ಮೊ.ಸಂ : **9632588100**	ಎಲ್ಲಾ ಭಾಗ ಮತ್ತು ವಿಭಾಗಗಳೆಲ್ಲವೂ ಸೇರಿದಂತೆ ಬೆಂಗಳೂರಿನ ಮತ್ತಿಕೆರೆಯ ಗೋಕುಲ, 1ನೇ ಹಂತ, 3ನೇ ಫೇಸ್‌ನ 1ನೇ 'ಡಿ' ಮುಖ್ಯ ರಸ್ತೆಯಲ್ಲಿ ನೆಲೆಗೊಂಡಿರುವ, ನಿವೇಶನ ಸಂಖ್ಯೆ 11, ಪುರಸಭೆ ಸಂಖ್ಯೆ 11 ಮತ್ತು ಪಿಐಡಿ ಸಂಖ್ಯೆ 3-5-11 ಆಗಿರುವ ಸ್ಥಿರಾಸ್ತಿ; ಅಳತೆ ಇದು ಪೂರ್ವ-ಪಶ್ಚಿಮವಾಗಿ 45 ಅಡಿ ಮತ್ತು ಉತ್ತರ-ದಕ್ಷಿಣವಾಗಿ 33 ಅಡಿ ಹೊಂದಿದ್ದು, ಒಟ್ಟು ವಿಸ್ತೀರ್ಣ 1485 ಚದರ ಅಡಿ ಒಳಗೊಂಡಿದೆ. ಈ ನಿವೇಶನದ ಮೇಲೆ ನೆಲ ಅಂತಸ್ತು ಹಾಗೂ ಅದರ ಮೇಲೆ 4 ಅಂತಸ್ತುಗಳನ್ನು (ಒಟ್ಟು ನೆಲ ಅಂತಸ್ತು + 4 ಅಂತಸ್ತುಗಳು) ಹೊಂದಿರುವ ಕಟ್ಟಡವಿದೆ. ಈ ಆಸ್ತಿಯು ಈ ಕೆಳಗಿನಂತೆ ಚಕ್ಕುಬಂಧಿಗಳನ್ನು ಹೊಂದಿದೆ: ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ಖಾಸಗಿ ಆಸ್ತಿ, ಉತ್ತರಕ್ಕೆ ರಸ್ತೆ ಮತ್ತು ದಕ್ಷಿಣಕ್ಕೆ ಖಾಸಗಿ ಆಸ್ತಿ. ಪ್ರಕಟಣೆ: ನಮ್ಮ ಬ್ಯಾಂಕಿನಲ್ಲಿ ಆಸ್ತಿಯ ಮೇಲೆ ಹೊಣೆಗಾರಿಕೆಯನ್ನು ಸೃಷ್ಟಿಸಿದ ನಂತರ, ಆಸ್ತಿಯ ಅಡಮಾನದಾರರು ಬ್ಯಾಂಕಿನ ಪೂರ್ವಾನುಮತಿಯನ್ನು ಪಡೆಯದೆ, ತಮ್ಮ ಮಗನ ಪರವಾಗಿ ಉಡುಗೊರೆ ಪತ್ರವನ್ನು ಬರೆದುಕೊಟ್ಟಿದ್ದಾರೆ ಮತ್ತು ಸದರಿ ಆಸ್ತಿಯ ಮೇಲೆ 'ನಗೌರ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್' ಸಂಸ್ಥೆಯೊಂದಿಗೆ ಮತ್ತೊಂದು ಹೊಣೆಗಾರಿಕೆಯನ್ನು ಸೃಷ್ಟಿಸಿದ್ದಾರೆ.	ಎ) 16.02.2017 ಬಿ) 16.07.2018 ಸಿ) ಸಾಂಕೇತಿಕ ಡಿ) ರೂ. 1,42,10,392.29 ಜೊತೆಗೆ ಮತ್ತಷ್ಟು ಬಡ್ಡಿ ಮತ್ತು ಇತರ ಶುಲ್ಕಗಳು ಅಂದರೆ 01.10.2026 ರಿಂದ ಅನ್ವಯ.	ಎ) ರೂ. 2,26,10,000/- ಬಿ) ರೂ. 22,61,000/- ಸಿ) ರೂ. 1,00,000/-

ನಿಯಮಗಳು ಮತ್ತು ನಿಬಂಧನೆಗಳು

ಮಾರಾಟವು ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು 2002 ರಲ್ಲಿ ಸೂಚಿಸಲಾದ ನಿಯಮಗಳು ಮತ್ತು ಷರತ್ತುಗಳಿಗೆ ಒಳಪಟ್ಟಿರುತ್ತದೆ ಮತ್ತು ಕೆಳಗಿನ ಮುಂದಿನ ಷರತ್ತುಗಳಿಗೆ ಒಳಪಟ್ಟಿರುತ್ತದೆ:

1. ಆಸ್ತಿಗಳನ್ನು "ಎಲ್ಲಿ ಆಧಾರವಿದೆಯೋ ಹಾಗೆ" ಮತ್ತು "ಯಾವುದು ಆಧಾರವಿದೆಯೋ ಹಾಗೆ" ಮತ್ತು "ಯಾವುದೇ ಆಧಾರವಿದೆಯೋ" ಎಂದು ಮಾರಾಟ ಮಾಡಲಾಗುತ್ತಿದೆ.
2. ಮೇಲೆ ನೀಡಿರುವ ಷೆಡ್ಯೂಲ್‌ನಲ್ಲಿ ನಮೂದಿಸಲಾದ ಭದ್ರತಾ ಆಸ್ತಿಗಳ ವಿವರಗಳನ್ನು ಅಧಿಕೃತ ಅಧಿಕಾರಿಯು ತಮ್ಮಲ್ಲಿರುವ ಮಾಹಿತಿಯ ಮೇರೆಗೆ ಅತ್ಯುತ್ತಮವಾಗಿ ತಿಳಿಸಿರುತ್ತಾರೆ; ಆದರೆ, ಈ ಪ್ರಕಟಣೆಯಲ್ಲಿ ಕಂಡುಬರುವ ಯಾವುದೇ ದೋಷ, ತಪ್ಪು ಹೇಳಿಕೆ ಅಥವಾ ಲೋಪಕ್ಕೆ ಅಧಿಕೃತ ಅಧಿಕಾರಿಯು ಜವಾಬ್ದಾರರಾಗಿರುವುದಿಲ್ಲ.
3. ಮಾರಾಟದ ದಿನದಂದು ಅಥವಾ ಮಾರಾಟದ ನಂತರದ ಮುಂದಿನ ಕೆಲಸದ ದಿನದೊಳಗೆ, ಇಎಂಡಿ ಮೊತ್ತವನ್ನೂ ಒಳಗೊಂಡಂತೆ ಮಾರಾಟದ ಬೆಲೆಯ 25% ರಷ್ಟು ಮೊತ್ತವನ್ನು ಪಾವತಿಸಲು ವಿಫಲವಾದರೆ, ನೀವು ಠೇವಣಿ ಇರಿಸಿದ ಮೊತ್ತವನ್ನು ಬ್ಯಾಂಕ್ ಯಾವುದೇ ಮುನ್ಸೂಚನೆಯಿಲ್ಲದೆ ಮುಟ್ಟುಗೋಲು ಹಾಕಿಕೊಳ್ಳುತ್ತದೆ.
4. ಮಾರಾಟ/ಬಿಡ್ ಬೆಲೆಯ ಜೊತೆಗೆ, ವಿದ್ಯುತ್ ಬಿಲ್ ಬಾಕಿ, ಸೊಸೈಟಿ ಶುಲ್ಕದ ಬಾಕಿ, ಆಸ್ತಿ ತೆರಿಗೆ ಬಾಕಿ ಇತ್ಯಾದಿ ಏನಾದರೂ ಇದ್ದರೆ, ಅವುಗಳ ನೈಜ ಮೊತ್ತವನ್ನು ಯಶಸ್ವಿ ಬಿಡ್‌ದಾರರೇ ಭರಿಸಬೇಕಾಗುತ್ತದೆ.
5. ದಿನಾಂಕ: 03.11.2026 ರಂದು ಬೆಳಿಗ್ಗೆ 11 ರಿಂದ ಮಧ್ಯಾಹ್ನ 3 ಗಂಟೆಯವರೆಗೆ ವೆಬ್‌ಸೈಟ್ **https://baanknet.com** ನಲ್ಲಿ ಒದಗಿಸಲಾದ ಇ-ಹರಾಜು ವೇದಿಕೆಯ ಮೂಲಕ ಕೆಳಗೆ ಸಹಿ ಮಾಡಿದವರು ಮಾರಾಟವನ್ನು ಮಾಡುತ್ತಾರೆ.
6. **https://baanknet.com** ವೆಬ್‌ಸೈಟ್‌ನಲ್ಲಿ ಒದಗಿಸಲಾದ ಇ-ಹರಾಜು ವೇದಿಕೆಯ ಮೂಲಕ ಇ-ಹರಾಜಿನ ಸೇವಾ ಪೂರೈಕೆದಾರರಾದ **M/s PSB Alliance Pvt. Ltd.** ಒದಗಿಸಲಿದೆ. ಇವರ ನೋಂದಾಯಿತ ಕಚೇರಿಯು ಈ ಕೆಳಗಿನ ವಿಳಾಸದಲ್ಲಿದೆ; ಘಟಕ 1, 3ನೇ ಮಹಡಿ, ವಿಐಒಎಸ್ ಕಮರ್ಷಿಯಲ್ ಟವರ್, ವಡಲಾ ಟ್ರಕ್ ಟರ್ಮಿನಲ್ ಹತ್ತಿರ, ವಡಲಾ ಈಸ್ಟ್, ಮುಂಬೈ-400037 (ಹೆಲ್ಪ್‌ಡೆಸ್ಕ್ ಸಂಖ್ಯೆ: +91 8291220220, ಇಮೇಲ್ ಐಡಿ: **support.baanknet@psballiance.com**). ಆಸಕ್ತ ಬಿಡ್‌ದಾರರು/ಖರೀದಿದಾರರು ಇ-ಹರಾಜು ಸೇವಾ ಪೂರೈಕೆದಾರರ ವೆಬ್‌ಸೈಟ್ **https://baanknet.com** ನಲ್ಲಿ ನಡೆಯುವ ಇ-ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸಬೇಕಾಗುತ್ತದೆ. ಈ ಸೇವಾ ಪೂರೈಕೆದಾರರು ಪೋರ್ಟಲ್‌ನಲ್ಲಿ ಇ-ಹರಾಜಿನ ಕುರಿತು ಆನ್‌ಲೈನ್ ಪ್ರಾತ್ಯಕ್ಷಿಕೆ/ತರಬೇತಿಯನ್ನೂ ಸಹ ಒದಗಿಸುತ್ತಾರೆ.

2002ರ ಸರ್ಫೇಸಿ ಕಾಯ್ದೆಯ ನಿಯಮ 8(6)ರ ಅಡಿಯಲ್ಲಿ ಶಾಸನಬದ್ಧ 15/30 ದಿನಗಳ ಮಾರಾಟದ ಸೂಚನೆ

ಸ್ಥಳ : ಬೆಂಗಳೂರು
ದಿನಾಂಕ : 18.10.2026

ಸಹಿ/- ಅಧಿಕೃತ ಅಧಿಕಾರಿ & ಮುಖ್ಯ ಪ್ರಬಂಧಕರು
ಪಂಜಾಬ್ ನ್ಯಾಷನಲ್ ಬ್ಯಾಂಕ್ (ಸೆಕ್ಯೂರ್ಡ್ ಕ್ರೆಡಿಟರ್)

ಬ್ಯಾಂಕ್ ಆಫ್ ಮಹಾರಾಷ್ಟ್ರ

Zen Life — Making Life Simpler — Bank of Maharashtra

ವಲಯ ಕಚೇರಿ, ಬೆಂಗಳೂರು, ನಂ. 465/ಎ, 1ನೇ ಮಹಡಿ, 22ನೇ ಕ್ರಾಸ್, 3ನೇ ಬ್ಲಾಕ್, NMKRV ಮಹಿಳಾ ಕಾಲೇಜು ಎದುರು, ಜಯನಗರ, ಬೆಂಗಳೂರು - 560011. ದೂರವಾಣಿ : 080 - 29509922,
ಇ-ಮೇಲ್ : legal_ban@bankofmaharashtra.bank.in, ಪ್ರಧಾನ ಕಛೇರಿ : ಲೋಕಮಂಗಲ, 1501, ಶಿವಾಜಿನಗರ, ಪುಣೆ - 411005.

ಸ್ಥಿರಾಸ್ತಿಗಳ ಮಾರಾಟಕ್ಕೆ ಅಧಿಸೂಚನೆ (ಅನುಬಂಧ IV-A)

ನಿಯಮ 2002 ರ ಸೆಕ್ಯೂರಿಟೈಜೇಷನ್ ಅಂಡ್ ರೀಕನ್‌ಸ್ಟ್ರಕ್ಷನ್ ಆಫ್ ಫೈನಾನ್ಶಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಕಾಯ್ದೆ 2002 ರಲ್ಲಿ ಸ್ಥಿರಾಸ್ತಿಗಳ ಹರಾಜು ಮಾರಾಟ. ಪ್ರೊವಿಜನ್ ನಿಯಮ 8(6) & 9(1) ರ ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) 2002ರ ಅಡಿಯಲ್ಲಿ ಸ್ಥಿರಾಸ್ತಿಗಳ ಹರಾಜು ಮಾರಾಟ. ಈ ಮೂಲಕ ಸಾರ್ವಜನಿಕರಿಗೆ ನಿರ್ದಿಷ್ಟವಾಗಿ ಸಾಲಗಾರರಿಗೆ ಮತ್ತು ಅಡಮಾನುದಾರರಿಗೆ ಸೂಚಿಸುವುದೇನೆಂಧರೆ ಭದ್ರತಾ ಸಾಲದಾತರಿಗೆ ಅಡಮಾನ / ಚಾರ್ಜ್ ಮಾಡಿರುವ ಈ ಕೆಳಗೆ ಸೂಚಿಸಿರುವ ಸ್ಥಿರಾಸ್ತಿಗಳನ್ನು, **ಅಧಿಕೃತ ಅಧಿಕಾರಿ, ಬ್ಯಾಂಕ್ ಆಫ್ ಮಹಾರಾಷ್ಟ್ರ** ಇವರು ಸ್ವಾಧೀನ ಪಡಿಸಿಕೊಂಡಿದ್ದು, ಸದರಿ ಆಸ್ತಿಗಳನ್ನು ಇ-ಹರಾಜಿನ ಮೂಲಕ **"ಎಲ್ಲಿ ಹೇಗಿದೆಯೋ ಹಾಗೆಯೇ", ಎಲ್ಲಿ ಇದೆಯೋ ಹಾಗೆಯೇ" ಮತ್ತು "ಎಲ್ಲಿ ಇದೆಯೋ ಹಾಗೆಯೇ"**, ದಿನಾಂಕ : **18.11.2026** ರಂದು ಮಾರಾಟ ಮಾಡಲಾಗುವುದು ಎಂದು ಸೂಚನೆ ನೀಡಲಾಗಿದೆ. ಈ ಕೋಷ್ಟಕದಲ್ಲಿ ಉಲ್ಲೇಖಿಸಿರುವಂತೆ, **ಬ್ಯಾಂಕ್ ಆಫ್ ಮಹಾರಾಷ್ಟ್ರಕ್ಕೆ** ಬಾಕಿ ಇರುವ ಬಾಕಿಯನ್ನು ವಸೂಲಿ ಮಾಡಲು ಬಾಕಿ ಮೊತ್ತ, ಸ್ಥಿರಾಸ್ತಿಯ ಸಂಕ್ಷಿಪ್ತ ವಿವರಣೆ ಮತ್ತು ಅವುಗಳ ಮೇಲಿನ ಋಣಭಾರಗಳು, ಸ್ವಾಧೀನದ ಪ್ರಕಾರ, ಮೀಸಲು ಬೆಲೆ ಮತ್ತು ಮುಂಗಡ ಹಣ ಠೇವಣಿಯನ್ನೂ ಸಹ ಈ ಕೆಳಗಿನಂತೆ ನೀಡಲಾಗಿದೆ.

ಕ್ರ. ಸಂ.	ಸಾಲಗಾರರ ಮತ್ತು ಜಾಮೀನುದಾರರ ಹೆಸರು ಮತ್ತು ವಿಳಾಸ	ಸ್ಥಿರಾಸ್ತಿಯ ಸಂಕ್ಷಿಪ್ತ ವಿವರಣೆ	ಬಾಕಿ ಮೊತ್ತ / ಸ್ವಾಧೀನ ವಿಧ / ಹೊಣೆಗಾರಿಕೆಗಳು	ಮೀಸಲು ಬೆಲೆ / ಇ.ಎಂ.ಡಿ. / ಬಿಡ್ ಹೆಚ್ಚಳ ಮೊತ್ತ
1.	ಅಸೆಟ್ ರೀಕವರಿ ಶಾಖೆ (ಮೊಬೈಲ್ : 9594544454 ಸಾಲಗಾರ/ರು : ಶ್ರೀ ಸಲ್‌ಫ್ರಾ ಎಂಟರ್‌ಪ್ರೈಸಸ್ ಮಾಲೀಕರು ಅಫ್ರಾ ಕೌಸರ್ 3ನೇ ಮಹಡಿ, ನಂ. ಬಿ-1 85, ಎಸ್.ಎಫ್.ಎಸ್. ಕಾಲೋನಿ ಯಲಹಂಕ ನ್ಯೂ ಟೌನ್, ಬೆಂಗಳೂರು - 560064.	ಸ್ವತ್ತಿನ ಎಲ್ಲಾ ಭಾಗ ಮತ್ತು ವಿಭಾಗಗಳು ಸೇರಿದಂತೆ ಫ್ಲ್ಯಾಟ್‌ನಲ್ಲಿ ಮೂರನೇ ಮಹಡಿಯ ಎಡ ಭಾಗ (ಪೂರ್ವದ ಕಡೆಗೆ) ಫ್ಲ್ಯಾಟ್ ನಂ. 302 ಎಂದು ಗುರುತಿಸಿದ್ದು, ಸೈಟ್ ನಂ. ಬಿ1-85 ರಲ್ಲಿ ನಿರ್ಮಿತ ಕಟ್ಟಡ, ದಿ ಕರ್ನಾಟಕ ಹೌಸಿಂಗ್ ಬೋರ್ಡ್‌ನಲ್ಲಿ ಟೈಪ್ "ಎ" ಎಸ್.ಎಫ್.ಎಸ್. ಎಂದು, ಯಲಹಂಕ ನ್ಯೂ ಟೌನ್, ಬೆಂಗಳೂರು - 560064, ಭೂಮಿಯ ಒಟ್ಟು ಅಳತೆ 250 ಚದರ ಮೀಟರ್‌ಗಳು, "ಯೂನಿಟಿ ರೆಸಿಡೆನ್ಸಿ" ಎಂಬ ಕಟ್ಟಡದಲ್ಲಿದ್ದು, ಇದರ ಸೂಪರ್ ಬಿಲ್ಟ್ ಅಪ್ 1219 ಚದರ ಅಡಿಗಳು (ಕಾರ್ಪೆಟ್ ಪ್ರದೇಶ 975 ಚದರ ಅಡಿ ಮತ್ತು 244 ಚದರ ಅಡಿಗಳ ಅಂದಾಜು ಪಾಲು ಸಾಮಾನ್ಯ ಪ್ರದೇಶಗಳಲ್ಲಿ ಅಂದರೆ, ಪ್ರವೇಶ, ಪ್ಯಾಸೇಜ್, ಲಿಫ್ಟ್, ಸ್ಟೇರ್ಸ್ ಇತ್ಯಾದಿ), ಜೊತೆಗೆ ಒಂದು ಕವರ್ಡ್ ಕಾರ್ ಪಾರ್ಕಿಂಗ್ ಸ್ಥಳ ಬೇಸ್‌ಮೆಂಟ್ ಫ್ಲೋರ್‌ನಲ್ಲಿದ್ದು, ಅಂದಾಜು ಅವಿಭಾಜಿತ ಪಾಲು, ಹಕ್ಕು, ಶೀರ್ಷಿಕ ಮತ್ತು ಆಸಕ್ತಿ ಇಲ್ಲಿ ಸೈಟ್ ನಂ. ಬಿ1-85 ಸಮನಾಂತರದ 320 ಚದರ ಅಡಿ, ಖಾತ ನಂ. 758 / 536 / 2594 / 524 / 85/7 / ಟಿ.ಎಫ್. / 302.	ರೂ. 1,42,15,549.00 ದಿನಾಂಕ : 30.09.2026 ರಂತೆ ಜೊತೆಗೆ ಹೆಚ್ಚುವರಿ ಬಡ್ಡಿ ದಿನಾಂಕ : 01.10.2026 ರಿಂದ ಹಾಗೂ ಎಲ್ಲಾ ವೆಚ್ಚಗಳು, ದಂಡ, ಶುಲ್ಕಗಳು ಮತ್ತು ಖರ್ಚುಗಳು ಅಥವಾ ಅದಕ್ಕೆ ಸಂಬಂಧಿಸಿದ ಇತರೆ ಪ್ರಾಸಂಗಿಕ ಶುಲ್ಕಗಳು. / ಭೌತಿಕ / ಇಲ್ಲ	ರೂ. 101.00 ಲಕ್ಷ / ಮೀಸಲು ಬೆಲೆಯ 10% / ರೂ. 50,000/-
2.	ಬಸವನಗುಡಿ ಶಾಖೆ (ಮೊಬೈಲ್ : 8056084417 ಸಾಲಗಾರ/ರು : 1. ಮೆ॥ ವಿಜಯುವ ಎಂಟರ್‌ಪ್ರೈಸಸ್ ನಂ. 60, ಗೊಲ್ಲರಪಾಳ್ಯ ಗ್ರಾಮ, ಮಂಚನಾಯಕನಹಳ್ಳಿ ಹೋಬಳಿ, ಬಿಡದಿ ತಾಲ್ಲೂಕು, ಬೆಂಗಳೂರು - 562109. ಜಾಮೀನುದಾರ/ರು : 1. ವಿಜಯ್ .ಕೆ 2. ವಿ. ಯುವರಾಣಿ ಇಬ್ಬರೂ 1 & 2 ವಾಸ ಇಲ್ಲಿ ನಂ. 1976, ಬನಶಂಕರಿ 6ನೇ ಸ್ಟೇಜ್, 4ನೇ ಬ್ಲಾಕ್, ಬಿ.ಡಿ.ಎ. ಲೇಔಟ್, ವೃಷಭಾವತಿ ನಗರ, ತಲಘಟ್ಟಪುರ, ಬೆಂಗಳೂರು, ಕರ್ನಾಟಕ - 560109.	ಭೂಮಿಯ ಎಲ್ಲಾ ಭಾಗ ಮತ್ತು ವಿಭಾಗಗಳು, ಇದರ ಸ್ಥಾಪನೆ ಇಲ್ಲಿ ಸೈಟ್ ನಂ. 1976, ಬನಶಂಕರಿ 6ನೇ ಸ್ಟೇಜ್, 4ನೇ ಬ್ಲಾಕ್‌ನಲ್ಲಿ ಲೇಔಟ್, ಲಿಂಗದೀರನಹಳ್ಳಿ ಗ್ರಾಮ, ಕೆಂಗೇರಿ ಹೋಬಳಿ, ಬೆಂಗಳೂರು, ಒಟ್ಟು ಅಳತೆ 581.26 ಚದರ ಅಡಿಗಳು.	ರೂ. 1,89,55,811.00 ದಿನಾಂಕ : 16.10.2026 ರಂತೆ ಜೊತೆಗೆ ಹೆಚ್ಚುವರಿ ಬಡ್ಡಿ ದಿನಾಂಕ : 17.10.2026 ರಿಂದ ಹಾಗೂ ಎಲ್ಲಾ ವೆಚ್ಚಗಳು, ದಂಡ, ಶುಲ್ಕಗಳು ಮತ್ತು ಖರ್ಚುಗಳು ಅಥವಾ ಅದಕ್ಕೆ ಸಂಬಂಧಿಸಿದ ಇತರೆ ಪ್ರಾಸಂಗಿಕ ಶುಲ್ಕಗಳು. / ಸಾಂಕೇತಿಕ / ಇಲ್ಲ	ರೂ. 95.00 ಲಕ್ಷ / ಮೀಸಲು ಬೆಲೆಯ 10% / ರೂ. 50,000/-
3.	ಬೆಂಗಳೂರು ಸಿಟಿ ಮಾರ್ಕೆಟ್ ಶಾಖೆ ಮೊಬೈಲ್ : 9420687887 ಸಾಲಗಾರ/ರು : 1. ಶ್ರೀ ಪ್ರಸನ್ನ ಕುಮಾರ್ ಸಿ.ಆರ್. 2. ಶ್ರೀಮತಿ ಹೆಚ್.ವಿ. ಭಾಮಿನಿ ಇಬ್ಬರೂ ಒಟ್ಟಿಗೆ ವಾಸ ಇಲ್ಲಿ ನಂ. 96-97, 1ನೇ ಮೇನ್, 7ನೇ ಕ್ರಾಸ್, ಬನಶಂಕರಿ ಸ್ಟೇಜ್-3, ಬಿ.ಡಿ.ಎ. ಲೇಔಟ್, ಆವಲಹಳ್ಳಿ, ಬೆಂಗಳೂರು - 560 085.	ಸ್ವತ್ತಿನ ಎಲ್ಲಾ ಭಾಗ ಮತ್ತು ವಿಭಾಗಗಳು ಸೇರಿದಂತೆ ವಸತಿಯುತ ಆಸ್ತಿ (ಭೂಮಿ & ಕಟ್ಟಡ), ಸೈಟ್ ಇದರ ನಂ. 96 & 97 ರಲ್ಲಿ ನಿರ್ಮಿತ ಸ್ಥಿರಾಸ್ತಿಯು ಇಲ್ಲಿ 1ನೇ ಮೇನ್, 7ನೇ ಕ್ರಾಸ್, ಬನಶಂಕರಿ 3ನೇ ಸ್ಟೇಜ್, ಹೊಸ ಬಿ.ಡಿ.ಎ. ಲೇಔಟ್, ಆವಲಹಳ್ಳಿ, ಗಿರಿನಗರ, ಬೆಂಗಳೂರು 560085, ಒಟ್ಟು ಅಳತೆಯಿಂದ 1200 ಚದರ ಅಡಿ.	ರೂ. 1,24,70,137.35 ದಿನಾಂಕ : 16.10.2026 ರಂತೆ ಜೊತೆಗೆ ಹೆಚ್ಚುವರಿ ಬಡ್ಡಿ ದಿನಾಂಕ : 17.10.2026 ರಿಂದ ಹಾಗೂ ಎಲ್ಲಾ ವೆಚ್ಚಗಳು, ದಂಡ, ಶುಲ್ಕಗಳು ಮತ್ತು ಖರ್ಚುಗಳು ಅಥವಾ ಅದಕ್ಕೆ ಸಂಬಂಧಿಸಿದ ಇತರೆ ಪ್ರಾಸಂಗಿಕ ಶುಲ್ಕಗಳು. / ಸಾಂಕೇತಿಕ / ಇಲ್ಲ	ರೂ. 267.00 ಲಕ್ಷ / ಮೀಸಲು ಬೆಲೆಯ 10% / ರೂ. 1,00,000/-

- ಇ-ಹರಾಜಿನ ದಿನಾಂಕ ಮತ್ತು ಸಮಯ : 18.11.2026 ಬೆಳಗ್ಗೆ 11.00 ರಿಂದ ಮಧ್ಯಾಹ್ನ 02.00 ರವರೆಗೆ.
- ಆಸ್ತಿ ತಪಾಸಣೆ ದಿನಾಂಕ ಮತ್ತು ಸಮಯ : 10.11.2026 ರಿಂದ 17.11.2026 ರವರೆಗೆ ಪೂರ್ವ ನೇಮಕಾತಿಯೊಂದಿಗೆ (ರಜಾ ದಿನಗಳನ್ನು ಹೊರತುಪಡಿಸಿ)
- ಬಿಡ್ / ಇಎಂಡಿ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ : 18.11.2026 ಮಧ್ಯಾಹ್ನ 02.00 ರವರೆಗೆ.

ಮಾರಾಟದ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ, ದಯವಿಟ್ಟು ಬ್ಯಾಂಕ್ ಆಫ್ ಮಹಾರಾಷ್ಟ್ರದ ವೆಬ್‌ಸೈಟ್‌ನಲ್ಲಿ ಒದಗಿಸಲಾದ ಲಿಂಕ್ ಅಂದರೆ, "https://www.bankofmaharashtra.bank.in/properties for sale" & "https://baanknet.com" ಅನ್ನು ಉಲ್ಲೇಖಿಸಿ.

ಸರ್ಫೇಸಿ ಕಾಯ್ದೆ, 2002 ರ ಅಡಿಯಲ್ಲಿ ಶಾಸನಬದ್ಧ 30 ದಿನಗಳ ಮಾರಾಟ ಸೂಚನೆ

ಸಾಲಗಾರರು/ರು ಮತ್ತು ಜಾಮೀನುದಾರರು/ಗಳು ಈ ಮೇಲ್ಕಂಡಂತೆ ಹೆಸರಿಸಲಾದ ಹರಾಜಿನ ದಿನಾಂಕದ ಮೊದಲು ದಿನಾಂಕಿತ ಬಡ್ಡಿ ಮತ್ತು ಪೂರಕ ವೆಚ್ಚಗಳೊಂದಿಗೆ ಈ ಮೇಲ್ಕಂಡಂತೆ ತಿಳಿಸಿದ ಮೊತ್ತವನ್ನು ಪಾವತಿಸಲು ಈ ಮೂಲಕ ಸೂಚಿಸಲಾಗಿದೆ, ಇಲ್ಲದಿದ್ದರೆ ಆಸ್ತಿಯನ್ನು ಹರಾಜು / ಮಾರಾಟ ಮಾಡಲಾಗುತ್ತದೆ ಮತ್ತು ಬಾಕಿ ಉಳಿದಿದ್ದರೆ ಅದನ್ನು ಬಡ್ಡಿ ಮತ್ತು ವೆಚ್ಚದೊಂದಿಗೆ ವಸೂಲಿ ಮಾಡಲಾಗುತ್ತದೆ.

ದಿನಾಂಕ : 18.10.2026
ಸ್ಥಳ : ಬೆಂಗಳೂರು

ಸಹಿ/- ಅಧಿಕೃತ ಅಧಿಕಾರಿ
ಬ್ಯಾಂಕ್ ಆಫ್ ಮಹಾರಾಷ್ಟ್ರ, ವಲಯ ಕಚೇರಿ, ಬೆಂಗಳೂರು.